ಕೆಡಿಸಿಕೊಂಡಿದ್ದೆಯಲ್ಲ, ಇಡು 'ಗೋಕುಲದಲ್ಲಿ ನಮ್ಮನೆ!' ಅಂತ ಮೆಸೇಜಿಸಿದ್ದರೆ, ಕಿರಿಯವಳು ಆಹಾ! ಎಂಥಾ ಪೀಸ್‌ಫುಲ್ ಕ್ರೀಚರ್ಸ್! ನೋಡುತಿದ್ದರೇ ಅಜ್ಜಯ್ಯನ ಮನೆ ನೆನಪಾಗುತ್ತದೆ! ಹೀಗಂತ ನನ್ನ ತವರನ್ನು ಜ್ಞಾಪಿಸಿದ್ದಳು! ಸಂಚಾರ ಹಾಗೂ ರಸ್ತೆ ನಿಯಮಗಳನ್ನೆಲ್ಲ ಕಡ್ಡಾಯವಾಗಿ ಪಾಲಿಸಲೇಬೇಕಾದಂಥ ಕಾನೂನಿನಡಿಯಲ್ಲಿರುವ ಅವರಿಗೆಲ್ಲ ಹೇಗೆ ಅರ್ಥವಾಗಬೇಕು ನಮ್ಮ ಈ ವಾಹನ ಸವಾರರ ಕಷ್ಟವೂ ತನ್ಮೂಲಕ ನಮ್ಮಂಥ ಹಿರಿಯ ನಾಗರಿಕರ ನಿದ್ರಾಭಂಗದ ವ್ಯಥೆಯೂ...

ನಿಜ, ಮನೆ ಮುಂದಿನ ಈ ಮಂದೆಯೂ ತಪ ತಪ ತೊಪ್ಪೆ ರಾಶಿ ಮತ್ತು ಗಂಜಲದ ವಾಸನೆಯೂ ನನಗೇನು ಹೊಸತಲ್ಲ.. ಅದಕ್ಕೋ ಏನೋ ಮೊರ ಹಾಗೂ ಕರಣೆ ಹಿಡಿದು ತೊಪ್ಪೆಯನ್ನೆಲ್ಲ ಎತ್ತಿ ನನ್ನ ಕೈತೋಟದ ಬುಡಕ್ಕೆ ಸುರಿದು ಮಣ್ಣು ಮುಚ್ಚಿ ಧನ್ಯತಾ ಭಾವ ಅನುಭವಿಸಿದರೂ ಈ ಎಲ್ಲ ರಂಪಗಳಿಗೆ ನೀವೇ ಕಾರಣ ಅನ್ನುವಂತೆ ಪತಿದೇವರ ಇದಿರು ಗೊಣಗುಟ್ಟುವುದನ್ನು ನಿಲ್ಲಿಸುವುದಿಲ್ಲ! (ವೃತ್ತಿಯಿಂದ ನಿವೃತ್ತಿಯಾದ ಮೇಲೆ ಬೀದಿ ನಾಯಿಗಳ ಮೇಲಿನ ವಿಶೇಷ ಕಾಳಜಿಯಿಂದಾಗಿ ಅವುಗಳಿಗೆಲ್ಲ ಹಾಲನ್ನ, ಬಿಸ್ಕೇಟ್, ಬನ್‌ಗಳ ಸಮಾರಾಧನೆಯ ಜೊತೆಗೆ ಒಂದು ಬಾನಿಯಲ್ಲಿ ಕುಡಿಯಲು ನೀರಿಡುವ ನನ್ನವರ ಪ್ರವೃತ್ತಿ ಈ ರಾಸುಗಳಿಗೂ ವರದಾನ!)

ಹಾಗೆ ನೋಡಿದರೆ ನನಗೆ ಈ ರಾಸುಗಳ ಒಡನಾಟ ಹೆಚ್ಚಾಗಿದ್ದದ್ದು ಪೂರ್ವಾಶ್ರಮದ ನನ್ನ ಬಾಲ್ಯ, ಕೌಮಾರ್ಯದಲ್ಲೇ. ಕರಾವಳಿ ಸಮೀಪದ ಅರೆಮಲೆನಾಡಿನ ಹಳ್ಳಿಯೊಂದರಲ್ಲಿ ಬೆಳೆದ ನನ್ನಂಥವರಿಗೆ ಈ ಗಂಟಿಗಳು ಪದ ಬದಲಾವಣೆಗೆ ಕ್ಷಮಿಸಿ ಅಲ್ಲಿ ಕರೆಯುವುದೇ ಹೀಗೆ) ನಿಜಕ್ಕೂ ಒಂದು ಪಾಠಶಾಲೆಯಂತಿದ್ದು ಸೆಕ್ಸ್, ಹೆರಿಗೆ ಮುಂತಾದ ನಿಸರ್ಗ ಸಹಜ ಗುಟ್ಟುಗಳೆಲ್ಲ ಗೊತ್ತಾಗುತ್ತಿದ್ದುದೇ ಇವುಗಳಿಂದ! ಮನೆಯೊಳಗಿನ ನಿತ್ಯದ ಶುದ್ಧೀಕರಣದಿಂದ ಹಿಡಿದು ಗದ್ದೆಯ ವ್ಯವಸಾಯದವರೆಗೂ ಗೋಮಯ, ಪಂಚಗವ್ಯ, ಭತ್ತ ಬಡಿಯುವ ಅಂಗಳದ ಸಾರಣೆ, ಗೊಬ್ಬರದ ಸಾಗಣೆ –ಹೀಗೆ ನಾನಾ ವಿಧದ ಕ್ರಿಯೆಗಳಲ್ಲಿ ಪಾಲ್ಗೊಳ್ಳುವ ಹಳ್ಳಿಯ ಮಕ್ಕಳಿಗೂ ಈ ಗಂಟಿಗಳಿಗೂ ಬಿಡಿಸಲಾಗದ ನಂಟು. ಅವಾಗ ಹಟ್ಟಿಯ(ಇದೂ ಅಲ್ಲಿನ ಪದವೇ) ತುಂಬೆಲ್ಲ ನಾಡ ಗಂಟಿಗಳೇ... ಸೊಪ್ಪು ಹಾಸಿದ ಹಟ್ಟಿಯ ಮುಂಭಾಗದ ಜಾಗವನ್ನೆಲ್ಲ ಕರಾವಿನ ದನಗಳು, ಎಮ್ಮೆಗಳು, ಉಳುವ ಜೋಡೆತ್ತು ಅಥವಾ ಕೋಣಗಳು ಆಕ್ರಮಿಸಿಕೊಂಡರೆ ಹಿಂಭಾಗದಲ್ಲಿ ಕರುಗಳು ಮತ್ತು ಕಡಸುಗಳು. ಮುಂದಿನವಕ್ಕೆಲ್ಲ ನೆಲದಲ್ಲೇ ಹುಗಿದ ಪರ್ಮನೆಂಟ್ ಸಿಮೆಂಟ್ ಬಾನಿಗಳಿದ್ದರೆ ಹಿಂದಿನವಕ್ಕೆ ಅಕ್ಕಚ್ಚು ಅಥವಾ ನೀರಿನ ಸಪ್ಲೈ ಕಬ್ಬಿಣದ ಬಾಲ್ದಿಯಲ್ಲಿ. ಪ್ರತಿಯೊಂದಕ್ಕೂ ಅವುಗಳದೇ ಆದ ಕಟ್ಟುಬಳ್ಳಿಯ ಜಾಗ. ಮನೆ ಚಿಕ್ಕದಿರಲಿ ದೊಡ್ಡದಿರಲಿ ಹಟ್ಟಿಯ ಗಾತ್ರ ಮಾತ್ರ ಅವರವರ ಹುಟ್ಟುವಳಿಗನುಸಾರವಾಗಿ ರೂಪುಗೊಳ್ಳುತಿತ್ತು. ಗಂಟಿ ಮೇಯಿಸಲು ಸ್ಪೆಶಲ್ಲಾಗಿ ಒಬ್ಬ ಹುಡುಗನ ನೇಮಕವಾಗಿರುತ್ತಿತ್ತಾದರೂ ನಟ್ಟಿಯ ಸಮಯದಲ್ಲಿ ಅವನು ಡೆಪುಟೇಶನ್ಮೇಲೆ ಗದ್ದೆಯ ಬಳಿ ಹೋಗುತ್ತಿದ್ದುದರಿಂದ ಅನಿವಾರ್ಯವಾಗಿ ಗಂಟಿ ಮೇಯಿಸುವ ಕೆಲಸ ಮಕ್ಕಳಾದ ನಮ್ಮ ಪಾಲಿಗೆ ಬರುತ್ತಿತ್ತು. ಇನ್ನು ರಜಾದಿನಗಳಲ್ಲಂತೂ ಕೇಳುವುದೇ ಬೇಡ! ಬೆಳಿಗ್ಗೆ ಗಂಜಿಯೂಟ ಮುಗಿಸಿಕೊಂಡು ಆಚೀಚೆ ಮನೆಯ ದೊಡ್ಡಪ್ಪ ಚಿಕ್ಕಪ್ಪಂದಿರ ಮಕ್ಕಳೆಲ್ಲ ಸೇರಿ ಅವರವರ ಗಂಟಿ ಹೊಡಕೊಂಡು ಸುಮಾರು ಎರಡು ಮೂರು ಮೈಲಿ ಸುತ್ತಾಡಿ, ಮರಕೋತಿ, ಕಬಡ್ಡಿ, ಕಣ್ಣಾಮುಚ್ಚಾಲೆ ಇತ್ಯಾದಿ ಆಟ ಆಡುತ್ತಾ, ಬುಕ್ಕಿ, ಕಿಸ್ಕಾರ, ಚೇಂಪಿ, ದುರುಕಲ, ಸಳ್ಳೆ, ನೇರಿಳೆ, ಬನ್ನೇರಳೆ, ಹೆಬ್ಬಲಸು, ಬೆಳ್ಮಾರು ಹೀಗೆ ಸಕಲೆಂಟು